# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | (582) 506 |
| ಸದಸ್ಯರ ಹೆಸರು | ಶ್ರೀ ಶಿವಕುಮಾರ್ ಕೆ.<br>(ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | 09-03-2026 |
| ಉತ್ತರಿಸುವವರು | ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಎಷ್ಟು ಅಭಯಾರಣ್ಯ ಪ್ರದೇಶದಲ್ಲಿ ಸಫಾರಿ ಚಾಲ್ತಿಯಲ್ಲಿದೆ; ಎಷ್ಟು ಅಭಯಾರಣ್ಯ ಪ್ರದೇಶದಲ್ಲಿ ಸಫಾರಿ ನಿಷೇಧಿಸಲಾಗಿದೆ; | • ರಾಜ್ಯದ ಒಟ್ಟು 11 ಸಂರಕ್ಷಿತ ಪ್ರದೇಶಗಳಲ್ಲಿ **[ಅನುಬಂಧ-1]** ಪ್ರಸ್ತುತ ಸಫಾರಿ ಚಟುವಟಿಕೆಯು ಚಾಲ್ತಿಯಲ್ಲಿರುತ್ತದೆ.<br>• ಬಂಡೀಪುರ ಹಾಗೂ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ದಿನಾಂಕ:07-11-2025 ರಿಂದ ಸಫಾರಿ ಚಟುವಟಿಕೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದ್ದು, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು, ಕರ್ನಾಟಕ ರವರ ಕಛೇರಿಯ ದಿನಾಂಕ: 21.02.2026ರ ಅಧಿಕೃತ ಜ್ಞಾಪನದಲ್ಲಿ ಸಫಾರಿ ಚಟುವಟಿಕೆಯನ್ನು ಹಂತ-ಹಂತವಾಗಿ ಪುನರಾರಂಭಿಸುವ ಷರತ್ತಿಗೊಳಪಟ್ಟು ಆದೇಶಿಸಲಾಗಿರುತ್ತದೆ **[ಅನುಬಂಧ-2]**. |
| ಆ) | ಸಫಾರಿಯಿಂದ ಸರ್ಕಾರಕ್ಕೆ ಬರುತ್ತಿದ್ದ ವಾರ್ಷಿಕ ಆದಾಯವೆಷ್ಟು; ಪ್ರಸ್ತುತ ಸಫಾರಿ ನಿಷೇಧಿಸಿರುವುದರಿಂದ ಸರ್ಕಾರಕ್ಕೆ ಆದಾಯದಲ್ಲಿ ಆಗಿರುವ ನಷ್ಟವೆಷ್ಟು; | • ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶಕ್ಕೆ ಸಂಬಂಧಿಸಿದಂತೆ ಸಫಾರಿ ಚಟುವಟಿಕೆಯಿಂದ ಅಂದಾಜು ರೂ.10.00 ಕೋಟಿಯಿಂದ ರೂ.12.00 ಕೋಟಿ ವಾರ್ಷಿಕ ಆದಾಯ ಬರುತ್ತಿದ್ದು, ದಿನಾಂಕ:07-11-2025 ರಿಂದ ದಿನಾಂಕ:21-02-2026 ರವರೆಗೆ ಸಫಾರಿ ನಿರ್ಬಂಧಿಸಿದ್ದರಿಂದ ಸರ್ಕಾರಕ್ಕೆ ಅಂದಾಜು ರೂ.2.00 ಕೋಟಿಯಿಂದ ರೂ.3.00 ಕೋಟಿ ನಷ್ಟವಾಗಿರುತ್ತದೆ.<br>• ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶಕ್ಕೆ ಸಂಬಂಧಿಸಿದಂತೆ ಸಫಾರಿ ಚಟುವಟಿಕೆಯಿಂದ ಅಂದಾಜು ರೂ.12.00 ಕೋಟಿ ವಾರ್ಷಿಕ ಆದಾಯ ಬರುತ್ತಿದ್ದು, ದಿನಾಂಕ:07-11-2025 ರಿಂದ ದಿನಾಂಕ:21-02-2026 ರವರೆಗೆ ಸಫಾರಿ ನಿರ್ಬಂಧಿಸಿದ್ದರಿಂದ ಸರ್ಕಾರಕ್ಕೆ ಅಂದಾಜು ರೂ.3.50 ಕೋಟಿ ನಷ್ಟವಾಗಿರುತ್ತದೆ. |
| ಇ) | ಬಂಡೀಪುರ ಮತ್ತು ನಾಗರಹೊಳೆ ಅಭಯಾರಣ್ಯ ಪ್ರದೇಶದಲ್ಲಿ ನಿಷೇಧಿಸಲಾಗಿರುವ ಸಫಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು? | ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು, ಕರ್ನಾಟಕ ರವರ ಕಛೇರಿಯ ದಿನಾಂಕ: 21.02.2026ರ ಅಧಿಕೃತ ಜ್ಞಾಪನದಲ್ಲಿ ಬಂಡೀಪುರ ಮತ್ತು ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಸಫಾರಿ ಚಟುವಟಿಕೆಯನ್ನು ಹಂತ-ಹಂತವಾಗಿ ಪುನರಾರಂಭಿಸಲು ಷರತ್ತುಗಳಿಗೊಳಪಟ್ಟು ಆದೇಶಿಸಲಾಗಿರುತ್ತದೆ. **[ಅನುಬಂಧ-2]** |

ಇ-ಸಂಖ್ಯೆ: ಅಪಜೀ 71 ಎಫ್‌ಡಬ್ಲ್ಯೂಎಲ್ 2026

(ಈಶ್ವರ ಬಿ. ಖಂಡ್ರೆ)
ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು

ಅನುಬಂಧ-1

**ರಾಜ್ಯದಲ್ಲಿ ಪ್ರಸ್ತುತ ಸಫಾರಿ ಚಟುವಟಿಕೆಯು ಚಾಲ್ತಿಯಲ್ಲಿರುವ ಸಂರಕ್ಷಿತ ಪ್ರದೇಶಗಳ ಪಟ್ಟಿ**

| ಕ್ರ. ಸಂ. | ವಿಭಾಗದ ಹೆಸರು | ಸಂರಕ್ಷಿತ ಪ್ರದೇಶದ ಹೆಸರು |
|---|---|---|
| 1 | ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ | ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ |
| 2 | ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ | ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ |
| 3 | ಭದ್ರಾ ಹುಲಿ ಸಂರಕ್ಷಿತ ಪ್ರದೇಶ | ಭದ್ರಾ ಹುಲಿ ಸಂರಕ್ಷಿತ ಪ್ರದೇಶ |
| 4 | ಕಾಳಿ ಹುಲಿ ಸಂರಕ್ಷಿತ ಪ್ರದೇಶ | ಕಾಳಿ ಹುಲಿ ಸಂರಕ್ಷಿತ ಪ್ರದೇಶ |
| 5 | ಬಿ.ಆರ್.ಟಿ. ಹುಲಿ ಸಂರಕ್ಷಿತ ಪ್ರದೇಶ | ಬಿ.ಆರ್.ಟಿ. ಹುಲಿ ಸಂರಕ್ಷಿತ ಪ್ರದೇಶ |
| 6 | ಕುದುರೆಮುಖ ವನ್ಯಜೀವಿ ವಿಭಾಗ | ಕುದುರೆಮುಖ ರಾಷ್ಟ್ರೀಯ ಉದ್ಯಾನವನ |
| 7 | ಗದಗ ಪ್ರಾದೇಶಿಕ ವಿಭಾಗ | ಕಪ್ಪತಗುಡ್ಡ ವನ್ಯಜೀವಿಧಾಮ |
| 8 | ಹಾವೇರಿ ಪ್ರಾದೇಶಿಕ ವಿಭಾಗ | ರಾಣೇಬೆನ್ನೂರು ಕೃಷ್ಣಮೃಗಧಾಮ |
| 9 | ವಿಜಯನಗರ ಪ್ರಾದೇಶಿಕ ವಿಭಾಗ | ದಾರೋಜಿ ಕರಡಿಧಾಮ |
| 10 | ಎಂ. ಎಂ. ಹಿಲ್ಸ್ ವನ್ಯಜೀವಿ ವಿಭಾಗ | ಎಂ. ಎಂ. ಹಿಲ್ಸ್ ವನ್ಯಜೀವಿಧಾಮ |
| 11 | ಕಾವೇರಿ ವನ್ಯಜೀವಿ ವಿಭಾಗ | ಕಾವೇರಿ ವನ್ಯಜೀವಿಧಾಮ |

5/3/26

**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ವನ್ಯಜೀವಿ)**
**ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು**
**ಕರ್ನಾಟಕ, ಬೆಂಗಳೂರು.**

ಅನುಬಂಧ - 2

ಸಂಖ್ಯೆಃ ಪ್ರಮುಅಸಂ(ವಜೀ)/ಡಿ(ಬಿ2)/ಸಿ
ಆರ್-103/2019-20

ಇ- ಆಫೀಸ್ ಸಂಖ್ಯೆ: 2083489

ಪ್ರಧಾನ ಮುಖ್ಯ ಅರಣ್ಯ
ಸಂರಕ್ಷಣಾಧಿಕಾರಿ (ವನ್ಯಜೀವಿ) ಮತ್ತು
ಮುಖ್ಯ ವನ್ಯಜೀವಿ ಪರಿಪಾಲಕರು
ಕರ್ನಾಟಕ, ಬೆಂಗಳೂರು.
ಕಛೇರಿ: 080-23341993
E-mail: pccfwl@gmail.com
ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು
ದಿನಾಂಕಃ 21-02-2026

**-:ಅಧಿಕೃತ ಜ್ಞಾಪನಾ ಪತ್ರ:-**

**ವಿಷಯ:** ಬಂಡೀಪುರ ಮತ್ತು ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಪರಿಸರ ಪ್ರವಾಸೋದ್ಯಮ ಚಟುವಟಿಕೆಗಳ ಕುರಿತು.

**ಉಲ್ಲೇಖ:**
1. ಮಾನ್ಯ ಸಚಿವರು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ರವರ ಟಿಪ್ಪಣಿ ದಿನಾಂಕ: 07-11-2025.
2. ಈ ಕಛೇರಿಯ ಪತ್ರ ಸಂಖ್ಯೆ: ಪ್ರಮುಅಸಂ(ವಜೀ)/ಡಿ(ಬಿ2)/ಸಿಆರ್-59/2020-21, ದಿನಾಂಕ: 07-11-2025.
3. ಈ ಕಛೇರಿಯ ಸಮಸಂಖ್ಯೆ ಅಧಿಕೃತ ಜ್ಞಾಪನಾ ಪತ್ರ ದಿನಾಂಕ: 05-01-2026.
4. ಈ ಕಛೇರಿಯ ಸಮಸಂಖ್ಯೆ ಅಧಿಕೃತ ಜ್ಞಾಪನಾ ಪತ್ರ ದಿನಾಂಕ: 14-01-2026
5. ತಾಂತ್ರಿಕ ಸಮಿತಿಯ ದಿನಾಂಕ: 22-01-2026 ರ ಮಧ್ಯಂತರ ವರದಿ.

****

**ಪ್ರಸ್ತಾವನೆ:**

2025 ನೇ ಸಾಲಿನ ಅಕ್ಟೋಬರ್ ಮತ್ತು ನವೆಂಬರ್ ತಿಂಗಳಲ್ಲಿ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಅಂಚಿನಲ್ಲಿ ಹುಲಿ ದಾಳಿಯಿಂದ ಮೂರು ಮಾನವ ಸಾವಿನ ಪ್ರಕರಣ ಮತ್ತು ಒಂದು ಮಾನವ ಗಾಯಗೊಂಡಿರುವ ಪ್ರಕರಣ ಉಂಟಾಗಿತ್ತು. ಈ ಸಮಸ್ಯೆಯ ಸೂಕ್ಷ್ಮತೆ, ಮಾನವ ಪ್ರಾಣದ ಪ್ರಾಮುಖ್ಯತೆ ಮತ್ತು ರೈತ ನಾಯಕರ ಸಲಹೆಯನ್ನು ಗಮನದಲ್ಲಿಟ್ಟುಕೊಂಡು, ಮಾನ್ಯ ಸಚಿವರು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ರವರು ಬಂಡೀಪುರ ಮತ್ತು ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಸಫಾರಿ ಮತ್ತು ಮಾನವ - ವನ್ಯಜೀವಿ ಸಂಘರ್ಷದ ಪ್ರದೇಶಗಳಲ್ಲಿ ಚಾರಣ ಚಟುವಟಿಕೆಗಳನ್ನು ತಕ್ಷಣವೇ ನಿಲ್ಲಿಸುವಂತೆ ದಿನಾಂಕ: 07-11-2025 ರಂದು ಉಲ್ಲೇಖ (1) ರ ಟಿಪ್ಪಣಿಯಲ್ಲಿ ನಿರ್ದೇಶಿಸಿರುತ್ತಾರೆ. ಅದರಂತೆ, ಉಲ್ಲೇಖ (2) ರ ಈ ಕಛೇರಿಯ ಆದೇಶದನ್ವಯ ಬಂಡೀಪುರ ಮತ್ತು ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಸಫಾರಿಯನ್ನು ತಾತ್ಕಾಲಿಕವಾಗಿ ನಿಲ್ಲಿಸಲು ನಿರ್ದೇಶನ ನೀಡಲಾಗಿರುತ್ತದೆ.

ಮುಂದುವರೆದು, ಸದರಿ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಪರಿಸರ ಪ್ರವಾಸೋದ್ಯಮದ ಸಾಮರ್ಥ್ಯವನ್ನು (Eco-tourism carrying capacity) ವೈಜ್ಞಾನಿಕವಾಗಿ ನಿರ್ಣಯಿಸಲು (Assessment) ತಾಂತ್ರಿಕ ಸಮಿತಿಯನ್ನು ರಚಿಸುವುದು ಹಾಗೂ ಪರಿಸರ ಪ್ರವಾಸೋದ್ಯಮ ಚಟುವಟಿಕೆಗಳನ್ನು ಹಂತ ಹಂತವಾಗಿ ಪ್ರಾರಂಭಿಸಬಹುದು ಎಂದು ದಿನಾಂಕ: 02-01-2026 ರಂದು ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ರವರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ

ವನ್ಯಜೀವಿ ಮಂಡಳಿಯ (SBWL) 20 ನೇ ಸಭೆಯಲ್ಲಿ ನಿರ್ಧರಿಸಲಾಗಿತ್ತು. ಅದರಂತೆ, ಉಲ್ಲೇಖ (3) ರ ಈ ಕಛೇರಿ ಅಧಿಕೃತ ಜ್ಞಾಪನಾ ಪತ್ರದನ್ವಯ ತಾಂತ್ರಿಕ ಸಮಿತಿಯನ್ನು ರಚಿಸಲಾಗಿತ್ತು.

ಪರಿಸರ ಪ್ರವಾಸೋದ್ಯಮ ಚಟುವಟಿಕೆಗಳನ್ನು ಹಂತ ಹಂತವಾಗಿ ಪುನರಾರಂಭಿಸುವ ಕುರಿತಾದ ರಾಜ್ಯ ವನ್ಯಜೀವಿ ಮಂಡಳಿಯ ಸೂಚನೆಯಂತೆ, ಅಂತಿಮ ವರದಿ ಸಲ್ಲಿಕೆಯಾಗುವವರೆಗೆ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಪ್ರತಿ ದಿನಕ್ಕೆ ಎಷ್ಟು ಭೇಟಿಗಳನ್ನು ಅನುಮತಿಸಬಹುದು ಎಂಬುದರ ಕುರಿತು ಮಧ್ಯಂತರ ವರದಿಯನ್ನು ಸಲ್ಲಿಸಲು ಉಲ್ಲೇಖ (4) ರ ಈ ಕಛೇರಿಯ ಅಧಿಕೃತ ಜ್ಞಾಪನಾ ಪತ್ರದಲ್ಲಿ ಸದರಿ ತಾಂತ್ರಿಕ ಸಮಿತಿಗೆ ಸೂಚಿಸಲಾಗಿತ್ತು.

ಅದರಂತೆ, ಬಂಡೀಪುರ ಮತ್ತು ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಪರಿಸರ ಪ್ರವಾಸೋದ್ಯಮವನ್ನು ಹಂತ ಹಂತವಾಗಿ ಪುನರಾರಂಭಿಸಲು ಪರಿಗಣಿಸಬಹುದಾದ ಅಂಶಗಳನ್ನೊಳಗೊಂಡ ಮಧ್ಯಂತರ ವರದಿಯನ್ನು ತಾಂತ್ರಿಕ ಸಮಿತಿಯು ಉಲ್ಲೇಖ (5) ರಲ್ಲಿ ಸಲ್ಲಿಸಿರುತ್ತದೆ.

ದಿನಾಂಕ: 02-01-2026 ರಂದು ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ರವರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ವನ್ಯಜೀವಿ ಮಂಡಳಿಯ 20 ನೇ ಸಭೆಯಲ್ಲಿ ಕೈಗೊಂಡ ನಿರ್ಧಾರದ ಪ್ರಕಾರ ಮತ್ತು ತಾಂತ್ರಿಕ ಸಮಿತಿಯ ಮಧ್ಯಂತರ ವರದಿಯ ಶಿಫಾರಸ್ಸಿನಂತೆ ಹಾಗೂ ಮಾನ್ಯ ಸಚಿವರು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ, ರವರು ದಿನಾಂಕ: 18-02-2026 ರಂದು ನಡೆದ ಸಭೆಯಲ್ಲಿ ಸೂಚಿಸಿದನ್ವಯ, ಬಂಡೀಪುರ ಮತ್ತು ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಪರಿಸರ ಪ್ರವಾಸೋದ್ಯಮ ಚಟುವಟಿಕೆಗಳನ್ನು ಪ್ರಾರಂಭಿಸಲು ಈ ಕೆಳಕಂಡ ಆದೇಶವನ್ನು ಹೊರಡಿಸಿದೆ.

**ಆದೇಶ**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಪರಿಗಣಿಸಿ, ವನ್ಯಜೀವಿ (ಸಂರಕ್ಷಣಾ) ಕಾಯ್ದೆ, 1972 ರ ಕಲಂ 28 ರಲ್ಲಿ ಈ ಕೆಳಸಹಿದಾರರಿಗೆ ಪ್ರದತ್ತವಾದ ಅಧಿಕಾರದನ್ವಯ ಈ ಕೆಳಕಂಡ ಷರತ್ತುಗಳಿಗೊಳಪಟ್ಟು, ಬಂಡೀಪುರ ಮತ್ತು ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಪರಿಸರ ಪ್ರವಾಸೋದ್ಯಮವನ್ನು ಈ ಕೆಳಕಂಡಂತೆ ಪುನರಾರಂಭಿಸಲು ಆದೇಶಿಸಿದೆ.

| ಹುಲಿ ಸಂರಕ್ಷಿತ ಪ್ರದೇಶ | ಪರಿಸರ ಪ್ರವಾಸೋದ್ಯಮ ವಲಯ | ಅನುಮತಿಸಲಾದ ಗರಿಷ್ಠ ಭೇಟಿಗಳು/ ದಿನ | ಪ್ರತಿ ಭೇಟಿಯ ಅವಧಿ | ವಿಹಾರಕ್ಕೆ ತೆರೆಯುವ ಅವಧಿ/ ದಿನ | ಬೆಳಗಿನ ಸಮಯ | ಸಂಜೆ ಸಮಯ |
|---|---|---|---|---|---|---|
| ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ | ಬಂಡೀಪುರ | ಒಟ್ಟು 31<br>(ಅರಣ್ಯ ಇಲಾಖೆ: 19 ಜೆ.ಎಲ್.ಆರ್.: 12) | 2.5 hours | 5 hours/day | 6:30 am – 9:00 am | 3:30 pm – 6:00 pm |
| ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ | ಸುಂಕದಕಟ್ಟೆ | ಒಟ್ಟು 36<br>(ಅರಣ್ಯ ಇಲಾಖೆ: 13 ಜೆ.ಎಲ್.ಆರ್.: 23) | 3 hours | 6 hours/day | 6:30 am – 9:30 am | 3:00 pm – 6:00 pm |
| | ನಾಗರಹೊಳೆ | ಒಟ್ಟು 14<br>(ಅರಣ್ಯ ಇಲಾಖೆ: 6 ಜೆ.ಎಲ್.ಆರ್.: 8) | 2 hours | 4 hours/day | 7:00 am – 9:00 am | 3:00 pm – 5:00 pm |

**ಷರತ್ತುಗಳು:**

1. ಸದರಿ ವಿಷಯವಾಗಿ ಮಾನ್ಯ ಸರ್ವೋಚ್ಛ ನ್ಯಾಯಾಲಯವು ನೀಡಿರುವ ಆದೇಶಗಳನ್ನು ಪಾಲಿಸುವುದು.
2. ಪ್ರಸ್ತುತ ಚಾಲ್ತಿಯಲ್ಲಿರುವ ಸಂಬಂದಪಟ್ಟ ಕಾಯ್ದೆ/ ನಿಯಮಾವಳಿ/ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ (NTCA) ಮಾರ್ಗಸೂಚಿಗಳನ್ನು ಪಾಲಿಸುವುದು.
3. ಪರಿಸರ ಪ್ರವಾಸೋದ್ಯಮ ಚಟುವಟಿಕೆಗಳಿಂದ ಬಂಡೀಪುರ ಮತ್ತು ನಾಗರಹೊಳೆ ಹುಲಿ ಸಂರಕ್ಷಣಾ ಪ್ರತಿಷ್ಠಾನ ನಿಧಿಗೆ ಬರುವ ಒಟ್ಟು ಆದಾಯದ ಮೂರನೇ ಒಂದು ಭಾಗದಷ್ಟು ಹಣವನ್ನು ಜನಜಾಗೃತಿ ಕಾರ್ಯಕ್ರಮಗಳು ಮತ್ತು ಪರಿಸರ ಅಭಿವೃದ್ಧಿ ಚಟುವಟಿಕೆಗಳಿಗೆ (ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳು, ಬುಡಕಟ್ಟು ಜನಾಂಗದವರು/ ಇತರೆ ಸ್ಥಳೀಯ ಜನರಿಗೆ ಮೂಲಸೌಕರ್ಯವನ್ನು ಒದಗಿಸುವುದು, ಇತ್ಯಾದಿ) ಬಳಸುವುದು.
4. ಮಾನವ-ವನ್ಯಜೀವಿ ಸಂಘರ್ಷ ತಡೆಗಟ್ಟಲು ಎಲ್ಲಾ ರೀತಿಯ ಸಮರ್ಪಕ ಪ್ರಯತ್ನಗಳನ್ನು ಕೈಗೊಳ್ಳುವುದು.
5. ಮುಂದಿನ ಎರಡು ತಿಂಗಳೊಳಗಾಗಿ ಎಲ್ಲಾ ಸಫಾರಿ ವಾಹನಗಳಿಗೆ ಇಂಜಿನ್ ಸಂಪರ್ಕಿತ ಜಿ.ಪಿ.ಎಸ್. ಉಪಕರಣ ಮತ್ತು ಡ್ಯಾಷ್ ಕ್ಯಾಮ್ ಅನ್ನು ಅಳವಡಿಸುವುದು.
6. ಪರಿಸರ ಪ್ರವಾಸೋದ್ಯಮ ಚಟುವಟಿಕೆಗಳಿಗೆ ಉಪಯೋಗಿಸಲಾಗುತ್ತಿದ್ದ ಅರಣ್ಯ ಇಲಾಖೆಯ ವಾಹನಗಳ ಪೈಕಿ ಶೇ. 50 ರಷ್ಟು ಇಲಾಖಾ ವಾಹನಗಳನ್ನು ಮಾತ್ರ ಸದರಿ ಪರಿಸರ ಪ್ರವಾಸೋದ್ಯಮ ಚಟುವಟಿಕೆಗಳಿಗೆ ಬಳಸುವುದು ಹಾಗೂ ಉಳಿದ ಶೇ. 50 ರಷ್ಟು ವಾಹನಗಳನ್ನು ಮಾನವ-ವನ್ಯಜೀವಿ ಸಂಘರ್ಷವನ್ನು ತಡೆಗಟ್ಟುವ ಕಾರ್ಯಕ್ಕೆ ಉಪಯೋಗಿಸುವುದು. ಮಾನವ-ವನ್ಯಜೀವಿ ಸಂಘರ್ಷವನ್ನು ತಡೆಗಟ್ಟುವ ಕಾರ್ಯಕ್ಕೆ ಹಾಗೂ ಕಾಡ್ಗಿಚ್ಚು ನಿಯಂತ್ರಣ ಕಾರ್ಯಕ್ಕೆ ಅಗತ್ಯವಿದ್ದಲ್ಲಿ ಅರಣ್ಯ ಇಲಾಖೆಗೆ ಜೆ.ಎಲ್.ಆರ್. ವತಿಯಿಂದ ವಾಹನಗಳನ್ನು ಒದಗಿಸುವುದು.
7. ಪರಿಸರ ಪ್ರವಾಸೋದ್ಯಮ ಚಟುವಟಿಕೆಗಳಿಗೆ ಉಪಯೋಗಿಸಲಾಗುತ್ತಿದ್ದ ವಾಹನಗಳ ಪೈಕಿ ಬಸ್ಸುಗಳನ್ನು ಆದ್ಯತೆಯ ಮೇಲೆ ಬಳಸುವುದು.

Digitally signed by
KUMAR PUSHKAR
Date: 21-02-2026
12:18:18

**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ)**
**ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು,**
**ಕರ್ನಾಟಕ, ಬೆಂಗಳೂರು.**

**ಪ್ರತಿಯನ್ನು:**

1. ಗೌರವಗಳೊಂದಿಗೆ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯಪಡೆ ಮುಖ್ಯಸ್ಥರು), ಅರಣ್ಯ ಭವನ, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.

3. ಮಾನ್ಯ ಸಚಿವರು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ, ರವರ ಆಪ್ತ ಕಾರ್ಯದರ್ಶಿ ರವರಿಗೆ ಕಳುಹಿಸುತ್ತಾ, ಸದರಿ ವಿಷಯವನ್ನು ಮಾನ್ಯ ಸಚಿವರ ಅವಗಾಹನೆಗೆ ಸಲ್ಲಿಸಲು ಕೋರಿದೆ.
4. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಹುಲಿ ಯೋಜನೆ), ಮೈಸೂರು ರವರ ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
5. ವ್ಯವಸ್ಥಾಪಕ ನಿರ್ದೇಶಕರು, ಅರಣ್ಯ ವಸತಿ ಮತ್ತು ವಿಹಾರಧಾಮಗಳ ಸಂಸ್ಥೆ (ನಿ.), ಖನಿಜ ಭವನ, ರೇಸ್ ಕೊರ್ಸ್ ರಸ್ತೆ, ಬೆಂಗಳೂರು ರವರ ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
6. ಅರಣ್ಯ ಸಂರಕ್ಷಣಾಧಿಕಾರಿ, ಮೈಸೂರು, ಕೊಡಗು ವೃತ್ತಗಳು ರವರ ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
7. ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕರು, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ರವರ ಮಾಹಿತಿ ಮತ್ತು ಕೂಡಲೇ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
8. ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕರು, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ ರವರ ಮಾಹಿತಿ ಮತ್ತು ಕೂಡಲೇ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.